# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು

ಸಂಖ್ಯೆ:ಸ.ಇಂ/ವಾ-153/ವಾರ್ಡ್ ಸಭೆ/2020-21 ದಿನಾಂಕ:19/12/2020

## ವಾರ್ಡ್ -153ರ ವಾರ್ಡ್ ಸಭೆಯ ನಡವಳಿ

ದಿನಾಂಕ:19/12/2020 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್-153ರ ವಾರ್ಡ್ ಕಛೇರಿಯಲ್ಲಿ ಶ್ರೀಮತಿ. ವರಲಕ್ಷ್ಮಿ ಸಹಾಯಕ ಆಯುಕ್ತರು, (ಆಡಳಿತ) ದಕ್ಷಿಣ ವಲಯ ವಾರ್ಡ್ 153ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ವರಲಕ್ಷ್ಮಿ | ಸಹಾಯಕ ಆಯುಕ್ತರು (ಆಡಳಿತ) ದಕ್ಷಿಣ ವಲಯ | ಹಾಜರಿದ್ದರು |
| 2 | ಶ್ರೀ. ನರಸಿಂಹಯ್ಯ ಎಸ್. | ಕಿರಿಯ ಅಭಿಯಂತರರು ವಾರ್ಡ್-153-ಜಯನಗರ | ಹಾಜರಿದ್ದರು |
| 3 | ಶ್ರೀ. ವಿದ್ಯಾಧರ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-153 | ಹಾಜರಿದ್ದರು |
| 4 | ಶ್ರೀ. ಚಿದಾನಂದ್ | ರೇಂಜ್ ಆಫೀಸರ್ ಅರಣ್ಯ ಇಲಾಖೆ | ಹಾಜರಿದ್ದರು |
| 5 | ಶ್ರೀ. ಹರಿಪ್ರಸಾದ್ | ಇನ್ಸ್‌ಪೆಕ್ಟರ್ ಸಿದ್ದಾಪುರ ಪೊಲೀಸ್ ಠಾಣೆ | ಹಾಜರಿದ್ದರು |

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ. ಲಕ್ಷ್ಮೀಶ | ಸದಸ್ಯರು | ಹಾಜರಿದ್ದರು |
| 2 | ಶ್ರೀ. ಭೀಮಪ್ಪ | ಸದಸ್ಯರು | ಹಾಜರಿದ್ದರು |
| 3 | ಶ್ರೀಮತಿ. ಪ್ರಮೀಳಾ | ಸದಸ್ಯರು | ಹಾಜರಿದ್ದರು |
| 4 | ಡಾ॥ ಪ್ರಕಾಶ್ | ಸದಸ್ಯರು | ಹಾಜರಿದ್ದರು |

ಪು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ರಾಜ್ | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ನಿಗಧಿತ ಸಮಯಕ್ಕೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರು ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಮತ್ತೊಮ್ಮೆ ಚರ್ಚಿಸಿದರು ವಿವರಗಳು ಈ ಕೆಳಕಂಡಂತಿವೆ.

1. **ವಾರ್ಡಿನಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

- ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರು ಮಾತನಾಡಿ, ಹಿರಿಯ ಆರೋಗ್ಯ ಪರಿವೀಕ್ಷಕರಿಗೆ (Residential Area) ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು. ಹಿರಿಯ ಆರೋಗ್ಯ ಪರಿವೀಕ್ಷಕರು ಮಾಹಿತಿ ಒದಗಿಸುವುದಾಗಿ ತಿಳಿಸಿದರು.
- ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರು ಮಾತನಾಡಿ, ಘನತ್ಯಾಜ್ಯ, ಕಸ ವಿಂಗಡಿಸಿ ನೀಡುವುದರ ಬಗ್ಗೆ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ಮಾಹಿತಿ ಕೋರಿದರು. ಈ ವಿಷಯವಾಗಿ ಶ್ರೀ. ವಿದ್ಯಾಧರ್ ರವರ ಪ್ರತಿಕ್ರಿಯಿಸಿ ಕಸ ವಿಂಗಡಣೆ ಸಮರ್ಪಕವಾಗಿ ನಡೆಯುತ್ತಿರುವುದಾಗಿ ಹಾಗೂ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸ ಕಸವನ್ನು ವಿಲೇವಾರಿ ಮಾಡುತ್ತಿರುವುದಾಗಿ ತಿಳಿಸಿದರು

2. **ಪಾದಚಾರಿ ಮಾರ್ಗಗಳ ಬಗ್ಗೆ:-**

- ಸಭೆಯಲ್ಲಿ ಹಾಜರಿದ್ದ ವಾರ್ಡಿನ ಸದಸ್ಯರಾದ ಡಾ॥ ಪ್ರಕಾಶ್ ರವರು ಮಾತನಾಡಿ 9ನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದ ಕಾಮಗಾರಿಯ ಕೆಲಸ ಪೂರ್ಣಗೊಳ್ಳುವ ಬಗ್ಗೆ ವಿಚಾರಿಸದರು. ಈ ವಿಷಯವಾಗಿ ಸಭೆಯಲ್ಲಿ ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರು ಹಾಗೂ ಕಿರಿಯ ಅಭಿಯಂತರರು ಈ ವಿಚಾರವಾಗಿ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ. ಅನಂತ್ ರವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದುಕೊಂಡು ಡಾ॥ ಪ್ರಕಾಶ್ ರವರಿಗೆ ತಿಳಿಸಲಾಯಿತು.

ಮು ಪಿ ನೋ..



Scanned with CamScanner

### 3. ವಾರ್ಡಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳ ಬಗ್ಗೆ:-

- ಸಭೆಯಲ್ಲಿ ಹಾಜರಾಗಿದ್ದ ಸ್ಥಳೀಯರಾದ ರಾಜ್ ರವರು ಮತ್ತು ಸದಸ್ಯರುಗಳಾದ ಶ್ರೀ. ಲಕ್ಷ್ಮೀಶ, ಶ್ರೀಮತಿ. ಪ್ರಮೀಳಾ ಹಾಗೂ ಶ್ರೀ. ಭೀಮಪ್ಪ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಹಲವು ಸ್ಥಳಗಳಲ್ಲಿ ಅಪರಿಚಿತರು ಅನಧಿಕೃತವಾಗಿ ಕಸ ಎಸೆಯುವುದನ್ನು ಹಾಗೂ ಡೆಬ್ರಿಸ್ ಹಾಕುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಒಮ್ಮತವಾಗಿ ಸಿ.ಸಿ. ಕ್ಯಾಮರಾವನ್ನು ಅಳವಡಿಸುವ ಬಗ್ಗೆ ಕೋರಿರುತ್ತಾರೆ. ಹಾಗೂ ವಾರ್ಡಿನಲ್ಲಿ ಎಲ್ಲೆಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಬೇಕು ಎಂಬ ಬಗ್ಗೆ ಪಟ್ಟಿಯನ್ನು ಸಹ ನೀಡುವುದಾಗಿ ಈ ಸಭೆಯಲ್ಲಿಯೂ ತಿಳಿಸಿರುತ್ತಾರೆ. ಈ ಬಗ್ಗೆ ವಾರ್ಡಿನ ಕಿರಿಯ ಅಭಿಯಂತರರು ಪ್ರತಿಕ್ರಿಯಿಸಿ ಸಿ.ಸಿ. ಕ್ಯಾಮರಾ ಅಳವಡಿಸುವ ಕಾಮಗಾರಿ ದಿನಾಂಕ:22-12-2020 ರಿಂದ ಪ್ರಾರಂಭಗೊಳ್ಳಲಿದ್ದು, ಸ್ಥಳೀಯರು ಹಾಗೂ ಸದಸ್ಯರು ನೀಡುವ ಪಟ್ಟಿಯ ಅನುಸಾರ ಕ್ಯಾಮರಾ ಅಳವಡಿಸುವ ಕಾರ್ಯ ನಿರ್ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

### 4. ಬೆಸ್ಕಾಂ ವಿಭಾಗ :-

- ಸಭೆಯಲ್ಲಿ ಹಾಜರಾಗಿದ್ದ ಸದಸ್ಯರುಗಳಾದ ಶ್ರೀಮತಿ. ಪ್ರಮೀಳಾ ಹಾಗೂ ಶ್ರೀ. ಭೀಮಪ್ಪ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದ, ದೀಪದ ಕಂಬಗಳ ಸಮಸ್ಯೆ ಬಗೆಹರಿದಿರುವುದಾಗಿ ತಿಳಿಸಿದರು.

### 5. ಅರಣ್ಯ ವಿಭಾಗ :-

- ಸಭೆಯಲ್ಲಿ ಹಾಜರಾಗಿದ್ದ ಸದಸ್ಯರಾ ಶ್ರೀ. ಲಕ್ಷ್ಮೀಶ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯಿಂದ ಕತ್ತರಿಸಿ ಹಾಕಿರುವ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ವಿಷಯವಾಗಿ ಶ್ರೀ. ಚಿದಾನಂದ, ರೇಂಜ್ ಆಫೀಸರ್ ಅರಣ್ಯ ಇಲಾಖೆಯವರು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮ ವಹಿಸಿ ಅರಣ್ಯ ಇಲಾಖೆಯಿಂದ ಕತ್ತರಿಸಿ ಹಾಕಿರುವ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸುವುದಾಗಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ, ಸ್ಥಳೀಯರಾದ ಶ್ರೀ. ರಾಜ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಮರಗಳ ಸಂರಕ್ಷಣೆಗಾಗಿ Tree Guard ಒದಗಿಸುವಂತೆ ಕೋರಿದರು. ಈ ವಿಷಯವಾಗಿ ಶ್ರೀ. ಚಿದಾನಂದ, ರೇಂಜ್ ಆಫೀಸರ್ ಅರಣ್ಯ ಇಲಾಖೆಯವರು ಮಾತನಾಡಿ ಈ ಬಗ್ಗೆ ಸೂಕ್ತ ಕ್ರಮ ವಹಿಸಿ ಮರದ Tree Guard ಒದಗಿಸುವುದಾಗಿ ತಿಳಿಸಿದರು.

ಮು.ತಿ.ನೋ..



Scanned with CamScanner

6. <u>ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ :-</u>

- ಶ್ರೀಮತಿ. ವರಲಕ್ಷ್ಮಿ, ಸಹಾಯಕ ಆಯುಕ್ತರು (ಆಡಳಿತ) ರವರಿಗೆ ದೂರವಾಣಿ ಮುಖಾಂತರ ಶ್ರೀ. ರಘುನಾಥ್ ರವರು ಕರೆಮಾಡಿ ಜಯನಗರ 1ನೇ ಬ್ಲಾಕ್‌ನಲ್ಲಿ ಒಳಚರಂಡಿ ಕೊಳವೆಗಳನ್ನು ಅಳವಡಿಸುವಂತೆ ಕೋರಿದರು. ಈ ವಿಷಯವಾಗಿ ಕಿರಿಯ ಅಭಿಯಂತರರು ಉತ್ತರಿಸಿ ಪ್ರಸ್ತುತ ಒಳಚರಂಡಿ ಕೊಳವೆ ಅಳವಡಿಸುವ ಕಾಮಗಾರಿಯ ಕಡತವನ್ನು ಪ್ರಗತಿಯಲ್ಲಿದ್ದು, ಅತಿ ಶೀಘ್ರವಾಗಿ ಕ್ರಮ ವಹಿಸುವುದಾಗಿ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/
(ನರಸಿಂಹಮ್ಮ ಎನ್.)
ಕಾರ್ಯದರ್ಶಿ
ವಾರ್ಡ್-153 ಜಯನಗರ

ಸಹಿ/
(ವರಲಕ್ಷ್ಮಿ)
ನೋಡಲ್ ಅಧಿಕಾರಿ
ವಾರ್ಡ್-153 ಜಯನಗರ



Scanned with CamScanner